MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.48 ENGLISH DAILY Subscription Yearly - Rs. - SATURDAY 27-8-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಗೋಡಂಬಿ ತಿರುಳು ಬೇಡಿಕೆ ಹೆಚ್ಚಳ ಸಾಧ್ಯತೆ

ಕೋವಿಡ್ ನಂತರ ಗೋಡಂಬಿ ತಿರುಳು ಬೇಡಿಕೆ ಹೆಚ್ಚಳವಾಗುತ್ತಿದ್ದು, ಮುಂದೆ ಭಾರತೀಯ ಹಬ್ಬಗಳ ಸೀಜನ್ ಬರುತ್ತಿರುವುದರಿಂದ ಬೇಡಿಕೆ ಹೆಚ್ಚಳವಾಗುವ ಸಾಧ್ಯತೆಗಳಿವೆ. ಈಗ ಹೋಟೆಲ್ ಉದ್ಯಮ, ಬೇಕರಿ ಇತ್ಯಾದಿಗಳು ಪೂರ್ಣಪ್ರಮಾಣದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ ಬೇಡಿಕೆ ಸಹಜವಾಗಿ ಹೆಚ್ಚಳವಾಗುತ್ತಿದೆ. ಇಡಿಗಿಂತ ತುಂಡು ಗೋಡಂಬಿಗಳಿಗೆ ಹೆಚ್ಚಿನ ದೇಶೀ ಬೇಡಿಕೆಯಿರುವುದರಿಂದ ಅವುಗಳ ದರ ವ್ಯತ್ಯಾಸ ಕಡಿಮೆಯಾಗಿದ್ದು, ಕೆಳ ಗ್ರೇಡ್‌ನ ಗೋಡಂಬಿ ತಿರುಳಿಗೆ ದರ ಹೆಚ್ಚಳ ಕಂಡಿದೆ. ರಫ್ತು ಬೇಡಿಕೆಯೂ ಮುಂದೆ ಹೆಚ್ಚಳವಾಗಬಹುದು. ಹಿಂದಿನ ವರ್ಷಕ್ಕಿಂತ ಉತ್ತಮ ಮಾರುಕಟ್ಟೆ, ಬೇಡಿಕೆ ಬರುವ ನಿರೀಕ್ಷೆಯಿದೆ.

## ಕಾಳು ಮೆಣಸು ದರ ಚೇತರಿಕೆ ಸಾಧ್ಯತೆ

ಜಾಗತಿಕವಾಗಿ ಕಾಳು ಮೆಣಸು ಉತ್ಪಾದನೆ ಇಳಿಕೆಯಾಗಿರುವುದರಿಂದ ಜಾಗತಿಕ ದರ ಹೆಚ್ಚಳವಾಗಿದೆ. ದೇಶೀ ಬೇಡಿಕೆಯೂ ಉತ್ತಮವಿದ್ದು, ಬೆಳೆಗಾರರು ಹೆಚ್ಚಿನ ದರದ ನಿರೀಕ್ಷೆಯಲ್ಲಿರುವುದರಿಂದ ಮಾರುಕಟ್ಟೆಗೆ ಆವಕ ಮಂದಗತಿಯಲ್ಲಿದೆ. ಇದರೊಂದಿಗೆ ಆಮದಾಗುತ್ತಿರುವುದೂ ದರ ಹೆಚ್ಚಳಕ್ಕೆ ತಡೆಯಾಗಿದೆ. ಆಮದು ನಿಯಂತ್ರಣಗೊಂಡಲ್ಲಿ ದೇಶೀ ಕಾಳುಮೆಣಸಿಗೆ ಬೇಡಿಕೆ ಹೆಚ್ಚಳಗೊಂಡು ಮುಂದೆ ದರ ಚೇತರಿಕೆಯಾಗುವ ಸಾಧ್ಯತೆಗಳಿವೆ.

## ಬೇಳೆಕಾಳು ಬೇಡಿಕೆ ಹೆಚ್ಚಳದ ನಿರೀಕ್ಷೆ

ಮುಂದೆ ನವರಾತ್ರಿ, ದೀಪಾವಳಿ ಹಬ್ಬಗಳಿರುವುದರಿಂದ ವ್ಯವಹಾರ ಚುರುಕುಗೊಂಡು ಬೇಳೆಕಾಳುಗಳಿಗೆ ಬೇಡಿಕೆ ಹೆಚ್ಚಳವಾಗುವ ನಿರೀಕ್ಷೆಯಿದೆ. ಮಳೆಯ ವ್ಯತ್ಯಯದಿಂದ ಬಿತ್ತನೆ ಹಾಗೂ ಖಾರೀಫ್ ಬೆಳೆಗೂ ಪ್ರತಿಕೂಲವಾಗುವ ಸಾಧ್ಯತೆಗಳಿದ್ದು, ಉತ್ಪಾದನೆ ಇಳಿಕೆಯಾಗುವ ಸಾಧ್ಯತೆಯಿಂದ ದರ ಈಗಾಗಲೇ ಹೆಚ್ಚಳವಾಗಿದೆ. ಸಾಕಷ್ಟು ದಾಸ್ತಾನು ಹಾಗೂ ಆಮದು ಸೌಲಭ್ಯಗಳಿದ್ದರೂ ಉತ್ತಮ ಗುಣಮಟ್ಟದ ಬೇಳೆಕಾಳುಗಳಿಗೆ ದರ ಹೆಚ್ಚಳ ಸಾಧ್ಯತೆಯಿದೆ.

## ಖಾದ್ಯ ತೈಲ ದರಗಳು ಇಳಿಕೆ

ಹೆಚ್ಚು ಬಳಕೆಯಾಗುತ್ತಿರುವ ಪಾಮೆಣ್ಣೆಯ ದರ ಇಳಿಕೆಯೊಂದಿಗೆ ಇತರ ಖಾದ್ಯ ತೈಲಗಳ ದರಗಳೂ ಇಳಿಕೆಯಾಗುತ್ತಿದೆ. ಹಿಂದೆ ಅನಿಯಂತ್ರಿತವಾಗಿ ಹೆಚ್ಚಳ ಕಂಡ ದರಗಳು ಈಗ ಇಳಿಕೆಯಾಗುತ್ತಿವೆ. ಪಾಮೆಣ್ಣೆ ಉತ್ಪಾದಕ ದೇಶಗಳಾದ ಇಂಡೋನೇಶೀಯಾ ಹಾಗೂ ಮಲೇಶಿಯಾಗಳಲ್ಲಿ ದಾಸ್ತಾನು ಹೆಚ್ಚಳವಾಗುತ್ತಿರುವುದರಿಂದ ಹಾಗೂ ಉತ್ಪಾದನೆಯೂ ಹೆಚ್ಚಳವಾಗುತ್ತಿರುವುದರಿಂದ, ಮುಂದೆಯೂ ಉತ್ಪಾದನೆ ಹೆಚ್ಚಳದ ಸಾಧ್ಯತೆಯಿಂದ ರಫ್ತು ಹೆಚ್ಚಳಮಾಡಬೇಕಾದ ಅನಿವಾರ್ಯತೆ ಉತ್ಪಾದಕ ದೇಶಗಳಿಗೆ ಇದೆ. ಇದರಿಂದ ದರ ಇನ್ನೂ ಇಳಿಕೆಯಾಗಬಹುದೆಂದು ವಿಶ್ಲೇಷಕರ ಅನಿಸಿಕೆಯಾಗಿದೆ. ಪರ್ಯಾಯ ಖಾದ್ಯ ತೈಲಗಳಾದ ಸೋಯಾಬೀನ್ ಎಣ್ಣೆ, ಸೂರ್ಯಕಾಂತಿ ಎಣ್ಣೆ ಬಳಕೆಗಳೂ ಹೆಚ್ಚಳವಾಗಿದೆ. ಈ ಹಿಂದೆ ಪಾಮೆಣ್ಣೆಯ ದರ ಹೆಚ್ಚಳದಿಂದಾಗಿ ಪರ್ಯಾಯ ಖಾದ್ಯತೈಲಗಳ ಬಳಕೆ ಹೆಚ್ಚಳವಾಗೆದೆ. ಪಾಮೆಣ್ಣೆ ದರ ಇಳಿಕೆಯಾದಾಗ ಸಹಜವಾಗಿ ಬಳಕೆಯೂ ಹೆಚ್ಚಳವಾಗುವ ಸಾಧ್ಯತೆಯಿದೆ.ಇದರಿಂದ ಪರ್ಯಾಯ ಖಾದ್ಯತೈಲ ಉತ್ಪಾದಕರು ಹಾಗೂ ಮಾರಾಟಗಾರರು ತಮ್ಮ ಮಾರುಕಟ್ಟೆ ಪಾಲು ಇಳಿಕೆಯಾಗದಿರಲು ದರ ಇಳಿಕೆ ಮಾಡುವ ಅನಿವಾರ್ಯತೆಗೆ ಸಿಲುಕುವ ಸಾಧ್ಯತೆಗಳಿದ್ದು ಮುಂದಿನ ದಿನಗಳಲ್ಲಿ ಖಾದ್ಯತೈಲಗಳ ದರ ಇಳಿಕೆಯಾಗುವ ಸಾಧ್ಯತೆಗಳಿವೆ.